ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 948

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಬಿ.ಕೆ ಹರಿಪ್ರಸಾದ್, (ವಿಧಾನ ಸಭೆಯಿಂದ ಚುನಾಯಿತರಾದವರು).

ಉತ್ತರಿಸಬೇಕಾದ ದಿನಾಂಕ : 15-03-2021

ಉತ್ತರಿಸಬೇಕಾದ ಸಚಿವರು : ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು.

ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದ ಎಷ್ಟು ನಗರ, ಪಟ್ಟಣ, ಹಳ್ಳಿಗಳಲ್ಲಿ, ಊರಿನ ಹಾಗೂ ಕೈಗಾರಿಕೆಗಳ ತ್ಯಾಜ್ಯ ಕಲುಷಿತ ನೀರು ನದಿಗೆ ಸೇರುತ್ತದೆ : ಈ ಬಗ್ಗೆ ಪರಿಸರ ಇಲಾಖೆಯಿಂದ ಸಮೀಕ್ಷೆ ನಡೆಸಲಾಗಿದೆಯೇ ?	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಯೋಗದೊಂದಿಗೆ ಪಟ್ಟಣಗಳಿಂದ ರೊಚ್ಚು ನೀರು ಹಾಗು ಕೈಗಾರಿಕಾ ತ್ಯಾಜ್ಯ ನೀರು ನದಿಗೆ ಸೇರುತ್ತಿರುವ ಬಗ್ಗೆ ಸಮೀಕ್ಷೆ ನಡೆಸಲಾಗಿರುತ್ತದೆ. ಈ ಸಂಬಂಧದಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ O.A.673/2018 ರಲ್ಲಿ ರಾಜ್ಯದಲ್ಲಿ ಪಟ್ಟಣ ಮತ್ತು ಕೈಗಾರಿಕೆಗಳಿಂದ ಉಂಟಾಗುತ್ತಿರುವ ತ್ಯಾಜ್ಯ ಕಲುಷಿತ ನೀರನ್ನು ನದಿಗೆ ಬಿಡುತ್ತಿರುವ ಬಗ್ಗೆ ಸಮೀಕ್ಷೆ ನಡೆಸಿ, ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿರುತ್ತದೆ. ಈ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ರೊಚ್ಚು ನೀರು ಉತ್ಪಾದನೆ, ನಿರ್ವಹಣೆ ಕುರಿತಾದ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯು 17 ಕಲುಷಿತ ನೀರಿನ ನದಿ ವಿಸ್ತರಣೆಯನ್ನು ಗುರುತಿಸಲಾಗಿದೆ ಹಾಗೂ ಅದರ ಸ್ಥಿತಿಗತಿಗಳನ್ನು ಮತ್ತು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಅನುಬಂಧ- 2 ರಲ್ಲಿ ಲಗತ್ತಿಸಲಾಗಿದೆ. ಮತ್ತು ಈ ಮೇಲಿನ ನದಿಗಳ ಜೊತೆಗೆ ಕರ್ನಾಟಕ ರಾಜ್ಯದಲ್ಲಿ 17 ಕಲುಷಿತ ನದಿ ಪಾತ್ರಗಳು ಇದ್ದು ಈ ನದಿಗಳಿಗೆ 42 ಪಟ್ಟಣಗಳ ತ್ಯಾಜ್ಯ ನೀರು ಸೇರುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಮಂಡಳಿಯು ತೆಗೆದುಕೊಂಡಿರುವ ಕ್ರಮಗಳ ಮತ್ತು ಸ್ಥಿತಿಗತಿಗಳ ವಿವರಗಳನ್ನು ಅನುಬಂಧ -2 ರಲ್ಲಿ ಲಗತ್ತಿಸಲಾಗಿದೆ. ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, 4 ಕೈಗಾರಿಕೆಗಳಿಗೆ ತ್ಯಾಜ್ಯ

		ನೀರನ್ನು ಸಂಸ್ಕರಿಸಿದ ನಂತರ ಮತ್ತು ಮಂಡಳಿಯು ನಿಗದಿ ಪಡಿಸಿದ ಗುಣ ಮಾಪನಗಳಿಗೆ ತೃಪ್ತಿಯಾದ ನಂತರವೇ ನದಿಗೆ ವಿಸರ್ಜಿಸಲು ನಿಬಂಧಿಸಿದೆ.
ಆ)	ಈ ರೀತಿ ಕಲುಷಿತ ತ್ಯಾಜ್ಯದ ನೀರನ್ನು ನದಿಗಳಿಗೆ ಬಿಡುವ ಪುರಸಭೆ, ಸ್ಥಳೀಯ ಸಂಸ್ಥೆ ಹಾಗೂ ಕಾರ್ಖಾನೆಗಳಿಗೆ ಪರಿಸರ ಇಲಾಖೆಯಿಂದ, ಪರಿಸರ ಮಂಡಳಿಯಿಂದ (ಪೊಲ್ಯೂಷನ್ ಕಂಟ್ರೋಲ್ ಬೋರ್ಡ್) ನೋಟೀಸ್ ನೀಡಲಾಗಿದೆಯೆ?	ಈ ಕಲುಷಿತ ತ್ಯಾಜ್ಯದ ನೀರನ್ನು ನದಿಗಳಿಗೆ ಬಿಡುವ ಪುರಸಭೆ, ಸ್ಥಳೀಯ ಸಂಸ್ಥೆ ಮತ್ತು ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಬಂಧ- 1, 2 ಮತ್ತು ಅನುಬಂಧ-3ರಲ್ಲಿ ತಿಳಿಸಿರುವಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತು ಅಂತಹ ಎಲ್ಲಾ ಘಟಕಗಳಿಗೆ ನೋಟೀಸ್ ಜಾರಿ ಮಾಡಿ, ಗುಣಮಾಪನಕ್ಕೆ ತಕ್ಕಂತೆ ಸಂಸ್ಕರಿಸಲು ಕ್ರಮ ತೆಗೆದುಕೊಳ್ಳುವಂತೆ ತಿಳಿಸಲಾಗಿದ್ದು, ಅದನ್ನು ಪ್ರಾದೇಶಿಕವಾಗಿ ಮೇಲ್ವಿಚಾರಣೆ ನಡೆಸಲಾಗಿರುತ್ತದೆ.
ಇ)	ಕಲುಷಿತ ನೀರನ್ನು ಹಾಗೂ ತ್ಯಾಜ್ಯಗಳನ್ನು ನದಿಗೆ ಬಿಡದಂತೆ ತಡೆಯಲು ಕೈಗೊಂಡಿರುವ ಕ್ರಮಗಳೇನು : ನದಿ ಪಾತ್ರಗಳ ಸ್ವಚ್ಛತೆಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ ?	ಮಂಡಳಿಯು ಇತರೆ ಇಲಾಖೆಯ ಸಹಯೋಗದೊಂದಿಗೆ ಅಂದರೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ಕೆ.ಯು, ಡಬ್ಲ್ಯೂ.ಎಸ್.ಎಸ್ ಬಿ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ(ಬಿ. ಡಬ್ಲ್ಯೂ.ಎಸ್.ಎಸ್.ಬಿ), ನಗರಾಭಿವೃದ್ಧಿ ಇಲಾಖೆ (ಯು.ಡಿ.ಡಿ), ಪೌರಾಡಳಿತ ನಿರ್ದೇಶನಾಲಯ (ಡಿ.ಎಂ.ಎ.), ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ(ಬಿ.ಬಿ.ಎಂ.ಪಿ), ಹಾಗೂ ನಗರ ಸಂಸ್ಥೆಗಳು, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ ನಿಯಮಿತ, (ಕೆ.ಯು.ಐ.ಡಿ.ಎಫ್.ಸಿ) ಸಹಯೋಗದೊಂದಿಗೆ ತೆಗೆದುಕೊಂಡಿರುವ ಮತ್ತು ಯೋಜಿಸಿರುವ ಕ್ರಮಗಳನ್ನು ಮೇಲಿನ ಅನುಬಂಧದಲ್ಲಿ ತಿಳಿಸಲಾಗಿರುತ್ತದೆ. ರಾಜ್ಯದಸ್ಥಳೀಯ ಸಂಸ್ಥೆಗಳಿಂದ ವಿಸರ್ಜಿಸುವ ರೊಚ್ಚುನೀರಿನ ಸಂಸ್ಕರಣಾ ಘಟಕಗಳ ಸ್ಥಾಪನೆ ಮತ್ತು ಅವುಗಳ ಪ್ರಗತಿಯನ್ನು ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯವು ಪ್ರತಿ ತಿಂಗಳು ಪರಿಶೀಲಿಸುತ್ತಿದೆ.

ಸಂಖ್ಯೆ: ಅಪಜೀ 08 ಇಎನ್‌ಜಿ 2021

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು
ಜೀವಿಪರಿಸ್ಥಿತಿ ಸಚಿವರು.

ಅನುಬಂಧ– 1

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಗರ, ಪಟ್ಟಣ ಮತ್ತು ಊರಿನ ತ್ಯಾಜ್ಯ ಕಲುಷಿತ ನೀರು ನದಿಗೆ ಸೇರುತ್ತಿರುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು:

ಕರ್ನಾಟಕ ರಾಜ್ಯದಲ್ಲಿ ಸುಮಾರು ಒಟ್ಟು 288 ಸ್ಥಳೀಯ ಸಂಸ್ಥೆಗಳನ್ನು ಗುರುತಿಸಲಾಗಿದ್ದು, 3,356 ಎಂಎಲ್‌ಡಿ ರೊಚ್ಚು ನೀರು ಉತ್ಪತ್ತಿಯಾಗುತ್ತಿದ್ದು, ಈ ಕಲುಷಿತ ನೀರನ್ನು ಸಂಸ್ಕರಣ ಮಾಡುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧದಲ್ಲಿ 141 ಎಸ್‌ಟಿಪಿ ಮತ್ತು 2 ಎಫ್‌ಎಸ್‌ಎಸ್‌ಎಮ್ ಸಂಸ್ಕರಣ ಘಟಕಗಳನ್ನು ಸರಿ ಸುಮಾರು 2,289 ಎಂಎಲ್‌ಡಿ ರೊಚ್ಚು ನೀರಿಗೆ ಸಂಸ್ಕರಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆ.ಯು, ಡಬ್ಲ್ಯೂ.ಎಸ್.ಎಸ್ ಬಿ) 69.4% (1592.47 ಎಮ್‌ಎಲ್‌ಡಿ)ರಷ್ಟನ್ನು ಶುದ್ಧೀಕರಿಸಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದ 30.6% ಹೆಚ್ಚು ನೀರನ್ನು ಸಂಸ್ಕರಿಸುವ ಬಗ್ಗೆ ರೊಚ್ಚು ನೀರಿನ ಸಂಸ್ಕರಣಾ ಘಟಕ (ಎಸ್.ಟಿ.ಪಿ) ಅಳವಡಿಸಲು ಸೂಚಿಸಲಾಗಿದ್ದು, ಈ ಸಂಬಂಧದಲ್ಲಿ 65 ಎಸ್‌ಟಿಪಿ (807 ಎಂಎಲ್‌ಡಿ) ಗಳನ್ನು ನಗರ ಸಂಸ್ಥೆಗಳಲ್ಲಿ ಅಳವಡಿಸಲಾಗಿರುತ್ತದೆ ಮತ್ತು ಉಳಿದ 274 ಎಂಎಲ್‌ಡಿ ರೊಚ್ಚು ನೀರಿಗೆ 120 ಎಸ್‌ಟಿಪಿ ಗಳನ್ನು ಅಳವಡಿಸಲು ಪ್ರಸ್ತಾವನೆಯನ್ನು ನೀಡಿರುತ್ತದೆ.

ಮಂಡಳಿಯು ಜಲ ಮಾಲಿನ್ಯ ಉಂಟು ಮಾಡುತ್ತಿರುವ ಸ್ಥಳೀಯ ಸಂಸ್ಥೆಗಳಿಗೆ ಆಗ್ಗಿಂದ್ದಾಗ್ಗೆ ಪರಿವೀಕ್ಷಣೆ ನಡೆಸಿ, ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಿ, ಮೇಲ್ವಿಚಾರಣೆ ನಡೆಸುತ್ತಿರುತ್ತದೆ. ಈ ಎಲ್ಲ ವಿಷಯಗಳನ್ನು ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯದಿಂದ ಮೇಲ್ವಿಚಾರಣೆ ನಡೆಸುತ್ತಿರುತ್ತದೆ.

***

ಅನುಬಂಧ– 2

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಗುರುತಿಸಿರುವ 17 ಮಾಲಿನ್ಯ ಕಾರಕ ನದಿ ವಿಸ್ತರಣಾ ಯೋಜನೆಯಲ್ಲಿ ತೆಗೆದುಕೊಂಡ ಕ್ರಮಗಳು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 17 ಮಲಿನ ನದಿ ಪಾತ್ರಗಳನ್ನು ಗುರುತಿಸಿದೆ. ಇದರ ಜೊತೆಗೆ ಸಂಬಂಧಿಸಿದ ನಗರ, ಪಟ್ಟಣಗಳು, ಪುರಸಭೆಗಳು, ಕಲುಷಿತ ನೀರನ್ನು ನದಿಗೆ ಸೇರುತ್ತಿರುವ ಪ್ರದೇಶಗಳನ್ನು ಈಗಾಗಲೇ ಗುರುತಿಸಿದೆ. ಈ ನದಿಗಳ ವಿವರಗಳು, ಪ್ರದೇಶ ಸ್ಥಳೀಯ ಸಂಸ್ಥೆ, ರೊಚ್ಚು ನೀರು ಉತ್ಪಾದನೆ, ರೊಚ್ಚು ನೀರಿನ ಸಂಸ್ಕರಣಾ ಘಟಕ (ಎಸ್‌ಟಿಪಿ) ಸಾಮರ್ಥ್ಯ ಮತ್ತು ಸಂಸ್ಕರಣ ವಿವರಗಳು ಅನುಬಂಧ–3 ರಲ್ಲಿ ನಮೂದಿಸಿದ್ದು, ಇದರೊಂದಿಗೆ ಲಗತ್ತಿಸಿದೆ.

ಮೇಲೆ ತಿಳಿಸಿದ 17 ಮಾಲಿನ್ಯ ನದಿ ಪ್ರದೇಶಗಳಲ್ಲಿ ಸುಮಾರು 884.25 (ಎಮ್‌ಎಲ್‌ಡಿ) ರೊಚ್ಚು ನೀರು ಸೇರುತ್ತಿರುವುದನ್ನು ಗಮನಿಸಲಾಗಿದೆ. ಈ ಮಲಿನ ನೀರನ್ನು ಸಂಸ್ಕರಿಸಲು 40 ರೊಚ್ಚು ನೀರಿನ ಸಂಸ್ಕರಣಾ ಘಟಕ(ಎಸ್‌ಟಿಪಿ)ಗಳನ್ನು, ಸುಮಾರು 635 ಎಮ್‌ಎಲ್‌ಡಿ ಸಾಮರ್ಥ್ಯಕ್ಕೆ ಅಳವಡಿಸಲಾಗಿರುತ್ತದೆ.(64.1 %)

ಉಳಿದ 35.9% ಮಲಿನ ನೀರಿಗೆ ರೊಚ್ಚು ನೀರಿನ ಸಂಸ್ಕರಣ ಘಟಕ (ಎಸ್‌ಟಿಪಿ)ಗಳನ್ನು ಅಳವಡಿಸಲು, ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದ್ದು, ಈ ಮೇರೆಗೆ 11 ಹೊಸ ರೊಚ್ಚು ನೀರಿನ ಸಂಸ್ಕರಣಾ ಘಟಕ(ಎಸ್‌ಟಿಪಿ) ಗಳನ್ನು (180.3ಎಂಎಲ್‌ಡಿ) ಸಾಮರ್ಥ್ಯದ ಎಸ್‌ಟಿಪಿಗಳನ್ನು ಈಗಾಗಲೇ ಅಳವಡಿಸುತ್ತಿದ್ದು, ಉಳಿದ ರೊಚ್ಚು ನೀರಿಗೆ ಸಂಸ್ಕರಣೆ ಮಾಡಲು 30 ರೊಚ್ಚು ನೀರಿನ ಸಂಸ್ಕರಣಾ ಘಟಕ(ಎಸ್‌ಟಿಪಿ) ಹಾಗೂ 1 ಎಫ್‌ಎಸ್‌ಎಸ್‌ಎಮ್ ಸಂಸ್ಕರಣಾ ಘಟಕಗಳು ಪ್ರಸ್ತಾವನೆ ಹಂತದಲ್ಲಿರುತ್ತದೆ. ಕೈಗಾರಿಕೆಗೆ ಸಂಬಂಧಿಸಿದಂತೆ, (1) ಗ್ರಾಸಿಮ್ ಇಂಡಸ್ಟ್ರೀಸ್ ಪ್ರೈವೇಟ್, (2) ಹರಿಹರ ಪಾಲಿಫೈಬರ್ಸ್ ಲಿಮಿಟೆಡ್, ದಾವಣಗೆರೆ(3) ಮೈಸೂರ್ ಪೇಪರ್ ಮಿಲ್ಸ್, ಭದ್ರಾವತಿ (4) ವೆಸ್ಟ್‌ಕೋಷ್ಟ್ ಪೇಪರ್ ಮಿಲ್ಸ್, ದಾಂಡೇಲಿ ಘಟಕಗಳಿಗೆ, ಮಾಲಿನ್ಯ ನೀರನ್ನು ಮಂಡಳಿಯ ಗುಣಮಾನಕಗಳಿಗೆ ಸಂಸ್ಕರಿಸಿದ ನಂತರವೇ ವಿಸರ್ಜಿಸಲು ಷರತ್ತಿನೊಂದಿಗೆ ಸಮ್ಮತಿ ನೀಡಿದೆ.

ಈ ಎಲ್ಲಾ ಕ್ರಮಗಳನ್ನು ಮಾನ್ಯ ರಾಷ್ಟ್ರೀಯ ಹಸಿರು ಪ್ರಾಧಿಕಾರ (ಎನ್.ಜಿ.ಟಿ) ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿ.ಪಿ.ಸಿ.ಬಿ)ರವರ ಮೇಲ್ವಿಚಾರಣೆಯಲ್ಲಿ ನಡೆಸಲಾಗುತ್ತಿದೆ. ಮಂಡಳಿಯು ಸಹ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

***

ಅನುಬಂಧ - 3

As on 03-03-2021

Details of sewage, municipal solid, plastic, Hazardous and biomedical waste pertaining to 17 PRS

Sl.No	Priority	River Name	District/RO	Polluted Stretch	ULBs	Town Status	Sewage generation (MLD)	No. of STPs	ULB wise present STP capacity (MLD)	Capacity utilization	Gap in treatment (MLD)	Ongoing STPs Designed Capacity (MLD)	Ongoing STPs Status	Proposed STPs Designed Capacity (MLD)	Proposed STPs Status	Municipal Solid Waste generated (TPD)	Municipal Solid Processed (TPD)	Plastic waste generated (TPD)	Hazardous waste generated (TPD)	Bio medical waste generated (TPD)
1	PIII	Arkavathi	Ramanagara	Thippagondanahalli Reservoir to Kanakapura	Ramanagara	CMC	10.27	1.00	7.56	7.56	0.00					40	10	0.986		
					Kanakpura	CMC	6.40	1.00	6.29	4	2.29					24	12	0.915		
					Bengaluru	BBMP	576.00	11.00	426.00	273.80	152.20	150.00	Under construction			909	525.2	81.04	7.36	0.0819
2	PIII	Lakshmanteertha	Mysuru	Hunasuru to Kattemalalvadi	Hunsuru	CMC	6.05	1.00	3.90	3.90	0.00			8.00	DPR submitted	23	14	0.45	0.0076	0.0061
3	PIII	Malaprabha	Belagavi	Khanapur to Ramdurg	Ramdurga	TMC	4.99	0.00	0.00	0.00	0.00	4.30	Under construction			16	4	0.153		
					Khanapura	TP	2.32	0.00	0.00	0.00	0.00			2.00	DPR submitted	6	2.5	0.137		
					Savadatti	TP	4.94	0.00	0.00	0.00	0.00					15	5.5	0.206		
					Mugalkhan-hubli	TP	1.61	0.00	0.00	0.00	0.00					3	0	0.007		
					Munnawali	TP	2.78	0.00	0.00	0.00	0.00					9	2.5	0.082		
4	PIII	Tungabhadra	Davangere	Harihara to haralahalli	Harihara	CMC	10.50	0.00	0.00	0.00	0.00	18.00	Commissioned			30	9	2.74		0.18
					Davanagere	CC	54.87	4.00	59.80	52.30	7.50					170	35	5.096		
					Ranibennuru	CMC	13.42	1.00	7.50	7.50	0.00	7.50	Commissioned			60	12	5		
					Honnali	TP	2.37	1.00	3.30	0.00	3.30			1.00	DPR submitted	7	0.8	0.011		
					huvina-hadgali	TMC	3.80	1.00	4.27	4.27	0.00					14.5	8	0.006		0.0002
5	PIV	Bhadhra	Shivamogga	Bhadravathi to Holehonnur	Bhadravathi	CMC	16.74	3.00	14.03	4.20	9.83			0.00	DPR submitted	50	15	3	0.023	0.29
6	PIV	Cauvery	Chamrajanagara	Muller to Sattegala Bridge, Chamarajanagara	Kollegala	CMC	7.21	1.00	9.00	5.00	4.00			2.40	DPR submitted	21	1.8	2.69		0.005
			Mandya Mysuru	from Ranganattitu Bird Santuary, Srirangapattana Taluk, Mandya District to Sattegala Road Bridge, Kollegala Taluk, Chamarajanagar District	Srirangapatna	TMC	3.80	2.00	3.90	3.90	0.00					10	2.6	0.584	0.0014	0.125
					bannuru	TMC	2.76	1.00	2.50	0.50	2.00					8.9	3	2		
					T-Narsipura	TMC	3.91	0.00	0.00	0.00	0.00	5.50	Trial run			10	1.5	0.304	67.338	0.0152
7	PIV	Kabini	Mysuru	Nanjanagud to Hejjige village	Nanjanagudu	CMC	5.00	1.00	7.00	2.35	4.65			0.00	DPR submitted	26	14	2		0.0119
8	PIV	Kagina	Kalburgi	Shahabad to Hongunta	Shahbad	CMC	6.11	0.00	0.00	0.00	0.00					20	18.5	1.63		0.04
9	PIV	Kali	UK - Dandeli	Hasan Maad (west coast paper mill) to Bommanahalli	Karwar	CMC	9.74	1.00	1.50	1.50	0.00			12.00	DPR submitted/ submission	26	22	0.05		
					Dandeli	CMC	8.50	0.00	0.00	0.00	0.00	8.50	Under construction			17	10	0.022	0.0382	0.025
10	PIV	Krishna	Chikkodi	Yadurwadi to Jungurwadi village	Ugarakhurdha	TMC	2.85	0.00	0.00	0.00	0.00			1.20	DPR submitted	8	1.5	0.088	0.0418	0.2265
			Vijayapura Raichur	Yalagur Village to narayanpur Bridge	Kudachi	TMC	2.78	0.00	0.00	0.00	0.00	2.50	Under construction	1.20	DPR submitted	6.5	3.9	0.055	0.005	0.015

			Raichur	North of Uppinhal village in Lingur taluk to Tintini Bridge in Devadurga taluk	Examba	TP	1.97	0.00	0.00	0.00	0.00			1.20	DPR submitted	4.5	0	0.044		
					Chinchilli	TP	2.64	0.00	0.00	0.00	0.00			1.20	DPR submitted	4.75	0	0.077		
					Chikkodi	TMC	4.83	1.00	5.80	1.80	4.00					14.5	2.5	0.178		
					Ainapura	TP	2.27	0.00	0.00	0.00	0.00			1.20	DPR submitted	5	0	0.055		
					Sadalaga	TMC	3.00	1.00	3.72	1.00	2.72					5	2	0.099		
11	PV	Asangi - Krishna	Bagalkote	Along Asangi Barrage, Bagalkot District.	Rabbakavi-Bannahatti	CMC	9.71	1.00	9.20	0.00	9.20					26	7	0.033		
					Teradal	TMC	3.30	0.00	0.00	0.00	0.00					10	1	0.008	0.019	0.61
12	PV	Shimsha	Mandya & Tumku	Yediyur to Halagur Bridge stretch	Maddur	TMC	4.51	1.00	3.50	3.50	0.00	6.00	Under construction			13.17	5.4	1.027	0.0101	0.02
13	PV	Bhima	Kalburgi	Ghanagapur to Yadgir	Jewargi	TP	3.25	1.00	3.25	0.00	3.25			5.83	DPR submitted	10	6	0.799		0.033
14	PV	Netravathi	DK	Netravathi	Uppinangdi	TMC	2.00	0.00	0.00	0.00	0.00					1.5	0.9	0.09		
					Panja and Kadaba	TMC	2.00	0.00	0.00	0.00	0.00					0.5	0.5	0.096		
					Bantwala	TMC	5.00	0.00	0.00	0.00	0.00			4.36	Land acquisition	14	7	0.003		
					Beltangdi	TP	1.00	0.00	0.00	0.00	0.00			0.006	DPR submitted	2.5	2	0.006		
15	PV	Kumaradhara	DK	Kumaradhara	Subramanya	GP	1.50	0.00	0.00	0.00	0.00			2.60	DPR submitted	1.1	0.66	0.066		0.18
16	PV	Tunga	Shivamogga	Shivamogga To Kudli	Shivamogga	CC	52.00	2.00	40.71	20.20	20.51			0.00	DPR submitted	170	142	11.83	0.2078	1.174
17	PV	Yagachi	Hassan	Belur to Halavagilu, Hassan	Hassan	CMC	12.17	1.00	10.00	10.00	0.00			39.00	DPR submitted	63	10	3.096		
					Belur	TMC	3.38	2.00	2.70	2.70	0.00			7.00	DPR submitted	8	8	0.343	0.14	
						CMC=14 TMC=14 CC=2 TP=10 GP=1 BBMP=1	**884.25**		**635.43**	**409.98**	**225.45**	**202.30**		**90.20**		**1883.4**	**929.26**	**127.1**	**75.192**	**3.0388**